# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 225 (181) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಐದು ವರ್ಷಗಳಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ (MUDA) ವತಿಯಿಂದ ಎಷ್ಟು ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗಿದೆ; ಹಾಗೂ ಎಷ್ಟು ಬಡಾವಣೆಗಳನ್ನು ಎಲ್ಲೆಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ; (ವಿವರ ನೀಡುವುದು) | ಕಳೆದ ಐದು ವರ್ಷಗಳಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ (MUDA) ವತಿಯಿಂದ ಯಾವುದೇ ಬಡಾವಣೆಗಳನ್ನು ಅಭಿವೃದ್ಧಿ ಪಡಿಸಿರುವುದಿಲ್ಲ.<br><br>ಪ್ರಸ್ತುತ ಯಾವುದೇ ಬಡಾವಣೆಗಳನ್ನು ಹೊಸದಾಗಿ ಅಭಿವೃದ್ಧಿಪಡಿಸಲು ಪ್ರಾಧಿಕಾರವು ಉದ್ದೇಶಿಸಿರುವುದಿಲ್ಲ. |
| ಆ) | ಸದರಿ ಅವಧಿಯಲ್ಲಿ 'MUDA' ವತಿಯಿಂದ ಎಷ್ಟು ಖಾಸಗಿ ಬಡಾವಣೆಗಳಿಗೆ ಮಂಜೂರಾತಿ/ ಅನುಮತಿ ನೀಡಲಾಗಿದೆ; (ವಿವರ ನೀಡುವುದು) | ಕಳೆದ ಐದು ವರ್ಷಗಳಲ್ಲಿ ಪ್ರಾಧಿಕಾರವು 05 ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡಲಾಗಿದೆ. (ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ) |
| ಇ) | MUDA ವ್ಯಾಪ್ತಿಯಲ್ಲಿ ರಚನೆಯಾಗಿದೆ ಎಂದು ಗುರುತಿಸಲಾಗಿರುವ ಅನಧಿಕೃತ ಬಡಾವಣೆಗಳ ಸಂಖ್ಯೆ ಎಷ್ಟು; ಇಂತಹ ಬಡಾವಣೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; ವಿಧಿಸಲಾದ ಮತ್ತು ಸಂಗ್ರಹಿಸಲಾದ ದಂಡದ ಮೊತ್ತ ಎಷ್ಟು; (ವಿವರ ನೀಡುವುದು) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ 03 ಅನಧಿಕೃತ ಬಡಾವಣೆಗಳನ್ನು ಗುರುತಿಸಲಾಗಿದ್ದು, ಸದರಿ ಬಡಾವಣೆಗಳ ವಿರುದ್ಧ ಕೈಗೊಂಡ ಕ್ರಮಗಳ ವಿವರವನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |
| ಈ) | MUDA ವತಿಯಿಂದ ಸಂಗ್ರಹಿಸಲಾಗಿರುವ ಕೆರೆ ಅಭಿವೃದ್ಧಿ ಶುಲ್ಕ ಎಷ್ಟು? ಸದ್ಯ ಲಭ್ಯವಿರುವ ಅನುದಾನ ಎಷ್ಟು; ಅಭಿವೃದ್ಧಿಪಡಿಸಲಾದ ಕೆರೆಗಳ ಸಂಖ್ಯೆ ಎಷ್ಟು; ಅವು ಯಾವುವು? (ಸಂಪೂರ್ಣ ವಿವರ ನೀಡುವುದು) | MUDA ವತಿಯಿಂದ ರೂ.1.79ಕೋಟಿಗಳ ಕೆರೆ ಅಭಿವೃದ್ಧಿ ಶುಲ್ಕ ಸಂಗ್ರಹಿಸಲಾಗಿರುತ್ತದೆ. ಕೆರೆ ಅಭಿವೃದ್ಧಿಗೆ ಪ್ರಾಧಿಕಾರದಲ್ಲಿ ಪ್ರಸ್ತುತ ರೂ. 1.79 ಕೋಟಿಗಳು ಲಭ್ಯವಿರುತ್ತದೆ.<br><br>ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈವರೆವಿಗೂ ಯಾವುದೇ ಕೆರೆಯನ್ನು ಅಭಿವೃದ್ಧಿಪಡಿಸಿರುವುದಿಲ್ಲ. ಪ್ರಸ್ತುತ ಕೋಣಹಳ್ಳಿ ವ್ಯಾಪ್ತಿಯ ಕೆರೆ ಅಭಿವೃದ್ಧಿ ಸಂಬಂಧ ಕಾರ್ಯಪಾಲಕ |

| | | |
|---|---|---|
| | | ಇಂಜಿನಿಯರ್, ಕಾವೇರಿ ನೀರಾವರಿ ನಿಗಮ, ಮಂಡ್ಯ ರವರಿಗೆ ಡಿ.ಪಿ.ಆರ್ ತಯಾರಿಸಲು ಕೋರಲಾಗಿದ್ದು, ಈ ಸಂಬಂಧ ಸದರಿಯವರಿಗೆ ದಿನಾಂಕ: 11.07.2025ರಂದು ರೂ. 5.25 ಲಕ್ಷಗಳನ್ನು ಪಾವತಿಸಲಾಗಿದೆ.<br><br>ಡಿ.ಪಿ.ಆರ್ ಸಿದ್ದವಾದ ಕೂಡಲೇ ದಿನಾಂಕ: 22.04.2025ರ ಸರ್ಕಾರದ ಸುತ್ತೋಲೆಯಂತೆ ಕೆರೆ ಅಭಿವೃದ್ಧಿ ಪಡಿಸಲು ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುವುದು. |

ಸಂಖ್ಯೆ :ನಅಇ 371 ಮೈಅಪ್ರಾ 2025(ಇ)

(ಬಿ.ಎಸ್ ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಡಿ

# ಅನುಬಂಧ-1

## ಪ್ರಾಧಿಕಾರದ ವತಿಯಿಂದ ಬಹುನಿವೇಶನ ವಿನ್ಯಾಸನಕ್ಷೆಯ ಖಾಸಗಿ ಬಡಾವಣೆಗಳಿಗೆ ಮಂಜೂರಾತಿ /ಅನುಮತಿ ನೀಡಿರುವ ವಿವರ

| ಕ್ರ.ಸಂ | ಬಡಾವಣೆ ಹೆಸರು | ಗ್ರಾಮ | ಸರ್ವೆ ನಂಬರ್ | ವಿಸ್ತೀರ್ಣ | ಉದ್ದೇಶ |
|---|---|---|---|---|---|
| 1 | ಶ್ರೀವಜ್ರ ಇನ್ಫ್ರಾಸ್ಟ್ರಕ್ಚರ್ | ಗೋಪಾಲಪುರ | 87 ಹಾಗೂ ಇತರೆ | 06ಎ-39.00 | ವಸತಿ |
| 2 | ಎಸ್ ಶಿವರಾಮು | ಗುತ್ತಲು | 889/1<br>889/2 | 0ಎ-20.00<br>0ಎ-20.00 | ವಸತಿ |
| 3 | ಡಿ ಸಂಜಯ | ಹಾಲಹಳ್ಳಿ | 54/2ಬಿ | 0ಎ-11.00 | ವಸತಿ |
| 4 | ಸರಸ್ವತಮ್ಮ ಪಿ | ಉಮ್ಮಡಹಳ್ಳಿ | 130/1 | 07ಎ-18.08 | ವಸತಿ |
| 5 | ಬಿ.ಚನ್ನೇಗೌಡ ಮತ್ತು ಮಕ್ಕಳು | ಉಮ್ಮಡಹಳ್ಳಿ | 129/1, 130/3, 130/4, 130/5<br>129/1 | 06ಎ-34.00<br>01ಎ-35.00 | ವಸತಿ<br>ವಾಣಿಜ್ಯ |

ಆಯುಕ್ತರು (ಪ್ರ),
ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ,
ಮಂಡ್ಯ

# ಅನುಬಂಧ-2

## ಅನಧಿಕೃತ ಬಡಾವಣೆಗಳ ಪಟ್ಟಿಗಳ ವಿವರ

| ಕ್ರ. ಸಂ | ಅಕ್ರಮವಾಗಿ ನಿರ್ಮಿಸಿರುವ ಬಡಾವಣೆಗಳ ಪಟ್ಟಿ | ಕೈಗೊಂಡ ಕ್ರಮ |
|---|---|---|
| 1. | ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಕಸಬಾ-1 ಹೋಬಳಿ, ಹೆಚ್.ಕೋಡಿಹಳ್ಳಿ ಗ್ರಾಮದ ಸ.ನಂ: 170/2 ರಲ್ಲಿ 01 ಎಕರೆ ವಿಸ್ತೀರ್ಣದ ಜಮೀನು. | ದಿನಾಂಕ:06-02-2021 ರಂದು ಈ ಕಛೇರಿಯಿಂದ ನೋಟಿಸ್ ಅನ್ನು ನೀಡಲಾಗಿರುತ್ತದೆ. |
| 2. | ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಕಸಬಾ-1 ಹೋಬಳಿ, ಗೋಪಾಲಪುರ ಗ್ರಾಮದ ಸ.ನಂ: 20/1 ರಲ್ಲಿ 0ಎ-35ಗುಂಟೆ, ಸ.ನಂ: 21/2 ರಲ್ಲಿ 0ಎ-28ಗುಂಟೆ ಮತ್ತು ಸ.ನಂ: 21/3 ರಲ್ಲಿ 0ಎ-17ಗುಂಟೆ ಒಟ್ಟು 02 ಎಕರೆ ವಿಸ್ತೀರ್ಣದ ಜಮೀನು. | i. ದಿನಾಂಕ:25-02-2021 ರಂದು ಅಕ್ರಮವಾಗಿ ನಿರ್ಮಾಣ ಮಾಡುತ್ತಿರುವ ಕುರಿತು ಸದರಿಯವರಿಗೆ, ಗೋಪಾಲಪುರ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಪತ್ರವನ್ನು ಬರೆದು, ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಮತ್ತು ಈ ಕಛೇರಿಗೆ ಪ್ರತಿಯನ್ನು ರವಾನಿಸಿರುತ್ತಾರೆ.<br>ii. ದಿನಾಂಕ: 05-03-2021 ರಂದು ಈ ಕಛೇರಿಯಿಂದ ನೋಟಿಸ್ ಅನ್ನು ನೀಡಲಾಗಿರುತ್ತದೆ.<br>iii. ದಿನಾಂಕ:23-04-2021 ರಂದು ಅಕ್ರಮವಾಗಿ ನಿರ್ಮಾಣ ಮಾಡುತ್ತಿರುವ ಕುರಿತು ಸದರಿಯವರಿಗೆ, ಗೋಪಾಲಪುರ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಪತ್ರವನ್ನು ಬರೆದು, ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಮತ್ತು ಈ ಕಛೇರಿಗೆ ಪ್ರತಿಯನ್ನು ರವಾನಿಸಿರುತ್ತಾರೆ.<br>iv. ದಿನಾಂಕ:26-08-2021 ರಂದು ಅಕ್ರಮವಾಗಿ ನಿರ್ಮಾಣ ಮಾಡುತ್ತಿರುವ ಕುರಿತು ಅಗತ್ಯ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು, ತಹಶೀಲ್ದಾರರು, ಮಂಡ್ಯ ತಾಲ್ಲೂಕು ಮತ್ತು ಈ ಕಛೇರಿಗೆ ಸೂಚಿಸಿರುತ್ತಾರೆ.<br>v. ದಿನಾಂಕ: 21-03-2022 ರಂದು ಈ ಕಛೇರಿಯಿಂದ ನೋಟಿಸ್ ಅನ್ನು ನೀಡಲಾಗಿರುತ್ತದೆ.<br>vi. ದಿನಾಂಕ: 20-12-2022 ರಂದು ಗೋಪಾಲಪುರ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ತಹಶೀಲ್ದಾರರು, ಮಂಡ್ಯ ತಾಲ್ಲೂಕು ರವರಿಗೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಲಾಗಿರುತ್ತದೆ. |

| | | |
|---|---|---|
| | | vii. ದಿನಾಂಕ:02-06-2023 ರಂದು ಗೋಪಾಲಪುರ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು. ಸದರಿ ಪ್ರಕರಣದ ಮಾಹಿತಿಯನ್ನು ತಹಶೀಲ್ದಾರರು, ಮಂಡ್ಯ ತಾಲ್ಲೂಕು ರವರಿಗೆ ಸಲ್ಲಿಸಿರುತ್ತಾರೆ.<br>viii. ದಿನಾಂಕ: 28-06-2023 ರಂದು ಈ ಕಛೇರಿಯಿಂದ ನೋಟಿಸ್ ಅನ್ನು ನೀಡಲಾಗಿರುತ್ತದೆ. |
| 3. | ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಕೊತ್ತತ್ತಿ ಹೋಬಳಿ, ಕ್ಯಾತುಂಗೆರೆ ಗ್ರಾಮದ ಸ.ನಂ: 115/ಎ1 ರಲ್ಲಿ 0ಎ-14ಗುಂಟೆ, ಸ.ನಂ: 115/ಎ2 ರಲ್ಲಿ 0ಎ-05ಗುಂಟೆ ಮತ್ತು 0ಎ-05.08ಗುಂಟೆ ಒಟ್ಟು 0ಎ-24.08ಗುಂಟೆ ವಿಸ್ತೀರ್ಣದ ಜಮೀನು. | i. ದಿನಾಂಕ: 06-02-2021 ರಂದು ಈ ಕಛೇರಿಯಿಂದ ನೋಟಿಸ್ ಅನ್ನು ನೀಡಲಾಗಿರುತ್ತದೆ.<br>ii. ದಿನಾಂಕ: 01-07-2023 ರಂದು ಭಾರತೀಯ ಜನತಾ ಪಾರ್ಟಿಯ ನಗರ ಪ್ರದಾನ ಕಾರ್ಯದರ್ಶಿಗಳು ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ.<br>iii. ದಿನಾಂಕ: 05-07-2023 ರಂದು ಬೇವಿನಹಳ್ಳಿ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಪತ್ರವನ್ನು ಬರೆಯಲಾಗಿರುತ್ತದೆ.<br>iv. ದಿನಾಂಕ: 24-08-2023 ರಂದು ಸದರಿ ಪ್ರಕರಣದ ಕುರಿತು ಬೇವಿನಹಳ್ಳಿ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತೊಮ್ಮೆ ಪತ್ರವನ್ನು ಬರೆಯಲಾಗಿರುತ್ತದೆ. |

ಆಯುಕ್ತರು(ಪ್ರ),
ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ,
ಮಂಡ್ಯ